ದಿ: 04-06-2019 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಶ್ರೀ ಎಂ.ಎಸ್.ಎಸ್. ವಕೀಲರಿಂದ :-

1. ನನ್ನ ತಂದೆ ಹೆಸರು ಹನುಮಂತಪ್ಪ, ಸದರಿ ಹನುಮಂತಪ್ಪನ ತಂದೆಯ ಹೆಸರು ಬೋಗಪ್ಪ. ಸದರಿ ಬೋಗಪ್ಪನಿಗೆ ಇಬ್ಬರು ಹೆಂಡತಿಯರು ಅಂದರೆ ಸರಿ. ಮೊದಲನೆ ಹೆಂಡತಿ ಹೆಸರು ಕರಿಯಮ್ಮ ಮತ್ತು ಎರಡನೇ ಹೆಂಡತಿ ಹೆಸರು ಕೆಂಗಜ್ಜಿ ಅಂದರೆ ಸರಿ. ಸದರಿ ಕರಿಯಮ್ಮಳಿಗೆ ತಿಮ್ಮಪ್ಪ ಎನ್ನುವ ಒಬ್ಬನೇ ಮಗ ಅಂದರೆ ಸರಿ. ಎರಡನೇ ಹೆಂಡತಿ ಕೆಂಗಜ್ಜಿಗೆ ಬೋಗಪ್ಪ, ಹನುಮಂತಪ್ಪ ಮತ್ತು ಸಣ್ಣತಿಮ್ಮಪ್ಪ ಎನ್ನುವ ಮೂವರು ಮಕ್ಕಳು ಅಂದರೆ ಸರಿ. ನಾನು ಸದರಿ ಹನುಮಂತಪ್ಪನ ಮಗ ಅಂದರೆ ಸರಿ. ನನ್ನ ತಂದೆ ಬದುಕಿರುತ್ತಾರೆ. ನನ್ನ ತಂದೆಗೆ ಅಂದರೆ 1 ನೇ ಪ್ರತಿವಾದಿ ಈ ದಾವೆಯಲ್ಲಿ ಸಮನ್ಸ್ ಜಾರಿಯಾಗಿರುತ್ತದೆ. 1 ನೇ ಪ್ರತಿವಾದಿಗೆ ಸುಮಾರು 90 ವರ್ಷಕ್ಕಿಂತ ಹೆಚ್ಚಿನ ವಯಸ್ಸಾಗಿದ್ದು, ಅವರನ್ನು ನಾವೇ ಕರೆದುಕೊಂಡು ಬಂದು ವಕೀಲರಿಗೆ ಮಾಹಿತಿ ನೀಡಿರುತ್ತೇವೆ. 1 ನೇ ಪ್ರತಿವಾದಿಯನ್ನು ಕೇಳಿಕೊಂಡು ಅವರು ನೀಡಿದ ಮಾಹಿತಿಯನ್ನು ವಕೀಲರಿಗೆ ನೀಡಿರುತ್ತೇನೆ.

2. ನಮ್ಮ ತಂದೆಗೆ ವಯಸ್ಸಾಗಿದ್ದು, ಅರಳು-ಮರಳಾಗಿರುವುದರಿಂದ ತಕರಾರಿನಲ್ಲಿ ಬರೆದಿರುವ ವಿಚಾರ ಅವರಿಗೆ ಗೊತ್ತಿಲ್ಲ ಅಂದರೆ ಸರಿ. 2 ನೇ ಪ್ರತಿವಾದಿಗೆ ತಕರಾರನ್ನು ಸಲ್ಲಿಸಿದ ಸಮಯದಲ್ಲಿ ತಿರುಗಾಡಲು ಆಗುತ್ತಿರಲಿಲ್ಲ. 2 ನೇ ಪ್ರತಿವಾದಿಯು ತಕರಾರನ್ನು ಸಲ್ಲಿಸಲು ವಕೀಲರಿಗೆ ಮಾಹಿತಿಯನ್ನು ನೀಡಿರುವ ಬಗ್ಗೆ ನನಗೆ ನೆನಪಿಲ್ಲ, ಕಾರಣ ಈ ದಾವೆಯನ್ನು ಸಲ್ಲಿಸಿ ಈಗ್ಗೆ ಸುಮಾರು 18 ವರ್ಷ ಆಗಿದ್ದು, ನಂತರ ಅದು ವಜಾ ಆಗಿದ್ದು, ಮತ್ತೆ ದಾವೆಯನ್ನು ರೆಸ್ಟೋರ್ ಮಾಡಲಾಗಿರುತ್ತದೆ. ನನ್ನ ದೊಡ್ಡಪ್ಪ ಬೋಗಪ್ಪನಿಗೆ ನಾಗಮ್ಮ ಎನ್ನುವ ಹೆಂಡತಿ ಇದ್ದರು ಅಂದರೆ ಇರಬಹುದು. ಸದರಿಯವರಿಗೆ ವಾದಿಯರು ಮಕ್ಕಳು ಅಂದರೆ ಸರಿ. ವಾದಿಯರ ತಾಯಿ ಕ್ಯಾನ್ಸರ್ ಖಾಯಿಲೆಯಿಂದ ಮರಣ ಹೊಂದಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ.

3. ನನ್ನ ತಾಯಿಯ ಹೆಸರು ಹನುಮಕ್ಕ. ನನ್ನ ತಾಯಿ ಕ್ಯಾನ್ಸರ್ ಖಾಯಿಲೆಯಿಂದ ಮರಣ ಹೊಂದಿರುತ್ತಾರೆ ಅಂದರೆ ಸಾಕ್ಷಿಯು ಖಾಯಿಲೆಯಿಂದ ಮರಣ ಹೊಂದಿರುತ್ತಾರೆ, ಆದರೆ ಯಾವ ಖಾಯಿಲೆಯಿಂದ ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ಹೆಂಡತಿಯ ಹೆಸರು ಗೌರಮ್ಮ ಅಂದರೆ ಸರಿ. ಸದರಿ ಗೌರಮ್ಮ ಕ್ಯಾನ್ಸರ್ ಖಾಯಿಲೆಯಿಂದ ಮರಣ ಹೊಂದಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ನಮ್ಮ ತಾಯಿ ಹಾಸಿಗೆ ಹಿಡಿದಿರಲಿಲ್ಲ. ನನ್ನ ದೊಡ್ಡಪ್ಪ ಬೋಗಪ್ಪ ಖಾಯಿಲೆಯಿಂದ ಮರಣ ಹೊಂದಿರುತ್ತಾರೆ ಅಂದರೆ ಸರಿ. ಅವರು ಹುಬ್ಬಳ್ಳಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಮರಣ ಹೊಂದಿರುತ್ತಾರೆ ಅಂದರೆ ಸರಿಯಲ್ಲ. ಅವರು ಮರಣ

ಹೊಂದಿದಾಗ ನಾನು ಚಿಕ್ಕ ಹುಡುಗನಾಗಿದ್ದೆನು. ಆಗಾಗಿ ಸದರಿ ಬೋಗಪ್ಪ ಎಷ್ಟು ವರ್ಷ ಖಾಯಿಲೆಯಿಂದ ನರಳಿ ಮರಣ ಹೊಂದಿದರು ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ.

4. ಸುಮಾರು 60-65 ಆಸ್ತಿಗಳಿಗೆ ಸಂಬಂಧಿಸಿದಂತೆ ಈ ದಾವೆಯನ್ನು ಸಲ್ಲಿಸಲಾಗಿದೆ. ನಮ್ಮ ತಾತ ಬೋಗಪ್ಪನಿಗೆ ಯಾವುದೇ ಸ್ವತ್ತುಗಳು ಇರಲಿಲ್ಲ. ನನ್ನ ತಂದೆ ಹಾಗೂ ಅವರ ಸಹೋದರರು ಒಟ್ಟು ಕುಟುಂಬದಲ್ಲಿ ಇದ್ದುದ್ದನ್ನು ನಾನು ನೋಡಿರುವುದಿಲ್ಲ. ನಮ್ಮ ತಾತ ಬೋಗಪ್ಪನನ್ನು ಸಾಕಿಕೊಂಡಿದ್ದ ಸಿದ್ದಜ್ಜಿಗೆ ಬೋಕಿಕೆರೆ ಗ್ರಾಮದ ರಿ.ಸ.ನಂ.79 ರಲ್ಲಿ ಸ್ವಯಾರ್ಜಿತ ಆಸ್ತಿ ಇದ್ದು, ಅದು ಸುಮಾರು 10 ಎಕರೆ ಇರುತ್ತದೆ. ಸದರಿ 10 ಎಕರೆ ಪೈಕಿ ಸುಮಾರು 7 ಚಿಲ್ಲರೆ ಎಕರೆಯನ್ನು ಈ ದಾವೆಯಲ್ಲಿ ಸೇರಿಸಲಾಗಿದೆ. ಸದರಿ 7 ಚಿಲ್ಲರೆ ಎಕರೆ ಆಸ್ತಿ 2 ನೇ ಪ್ರತಿವಾದಿಯ ಮಗ ಕೃಷ್ಣೂಮೂರ್ತಿ, 3 ಮತ್ತು 4 ನೇ ಪ್ರತಿವಾದಿ ಹೆಸರಿನಲ್ಲಿರುತ್ತದೆ. ಸದರಿ ಸ್ವತ್ತಿನ ಖಾತೆ ಅದಕ್ಕೂ ಪೂರ್ವದಲ್ಲಿ ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ಸಿದ್ದಜ್ಜಿಯ 10 ಎಕರೆ ಜಮೀನನ್ನು 04 ಭಾಗ ಮಾಡಲಾಗಿದ್ದು, ಅದನ್ನು ನಮ್ಮ ತಾತನ 4 ಜನ ಮಕ್ಕಳು ಅನುಭವಿಸುತ್ತಿದ್ದರು. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಸದರಿ ವಿಚಾರವನ್ನು ನಾನು ನನ್ನ ತಕರಾರಿನಲ್ಲಿ ಹೇಳಿ ಬರೆಸಿರುತ್ತೇನೋ ಇಲ್ಲವೋ ನನಗೆ ನೆನಪಿಲ್ಲ.

5. ನಿಡಿ-56, 1953 ನೇ ಸಾಲಿನ ಪಾರಿಕತ್ತಾಗಿರುತ್ತದೆ. ನಿಡಿ-56 ರ ಪಾರಿಪಾಲುಕತ್ತನ್ನು ನಾನು ಓದಿರುತ್ತೇನೆ. ನಾನು 4 ನೇ ತರಗತಿ ಓದಿರುತ್ತೇನೆ. ನನಗೆ ಕನ್ನಡ ಓದಲು, ಬರೆಯಲು ಸುಮಾರಾಗಿ ಬರುತ್ತದೆ. ನಿಡಿ-56 ರ ಪ್ರಕಾರ ನಮ್ಮ ತಂದೆ ಮಾತ್ರ ತನ್ನ ಪಾಲಿನ ಭಾಗವನ್ನು ತೆಗೆದುಕೊಂಡು ಒಟ್ಟು ಕುಟುಂಬದಿಂದ ಹೊರ ಹೋಗಿರುತ್ತಾರೆ. ನನ್ನ ತಂದೆಯ 3 ಜನ ಸಹೋದರರು ನಿಡಿ-56 ರ ಪತ್ರವನ್ನು ನನ್ನ ತಂದೆಗೆ ಬರೆದು ಕೊಟ್ಟಿರುತ್ತಾರೆ ಅಂದರೆ ಸರಿ. ನನ್ನ ತಂದೆಯ ಮೂವರು ಸಹೋದರರು 1953 ರ ನಂತರ ಯಾವಾಗ ಭಾಗ ಆಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಆದರೆ ಅವರು ನಿಡಿ-56 ರ ದಿನಾಂಕದಂದೇ ಭಾಗ ಆಗಿರುತ್ತಾರೆ. ನಿಡಿ-56 ರ ದಿನಾಂಕದಂದೇ ನನ್ನ ತಂದೆಯ 3 ಜನ ಸಹೋದರರು ಭಾಗ ಆಗಿರುತ್ತಾರೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ ಅದರೆ ಸಾಕ್ಷಿಯು ನಮ್ಮ ಬಳಿ ಇರುವುದಿಲ್ಲ, ಅವರ ಬಳಿ ಇರುತ್ತದೆ ಅಂತ ನುಡಿಯುತ್ತಾರೆ. ಅವರ ಬಳಿ ಭಾಗ ಆದ ಬಗ್ಗೆ ದಾಖಲೆ ಇರುತ್ತದೆ ಎಂದು ತಕರಾರಿನಲ್ಲಿ ಹೇಳಿರುವುದಿಲ್ಲ.

6. ನಿಡಿ-56 ರಡಿ ನಮ್ಮ ತಂದೆಯ ಭಾಗಕ್ಕೆ ಅಜ್ಜಿಯ ಜಮೀನು ಸೇರಿದಂತೆ ಸುಮಾರು 3-4 ಆಸ್ತಿ ಬಂದಿರಬಹುದು. ಸದರಿ ಆಸ್ತಿಗಳು ಯಾವುವು ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳ ರಿ.ಸ.ನಂ., ವಿಸ್ತೀರ್ಣ ಮತ್ತು ಇತ್ಯಾದಿ ವಿವರಗಳು ನನಗೆ ಗೊತ್ತಿಲ್ಲ. ಸಿದ್ದಜ್ಜಿಯ ಆಸ್ತಿ ಅಲ್ಲದೇ ನಮ್ಮ ತಂದೆ ಭಗರ್ ಹುಕ್ಕುಂ ಅಡಿ ಸಾಗುವಳಿ ಮಾಡುತ್ತಿದ್ದ ಜಮೀನು ಮತ್ತು ಕ್ರಯಕ್ಕೆ ಪಡೆದ ಜಮೀನುಗಳು ನಿಡಿ-56 ರಡಿ ನಮ್ಮ ತಂದೆಯ ಭಾಗಕ್ಕೆ ಬಂದ ಸ್ವತ್ತುಗಳಲ್ಲಿ ಸೇರಿರುತ್ತದೆ. ನಮ್ಮ

ತಂದೆಯ ಮೂವರು ಸಹೋದರರಿಗೆ ಆ ಸಮಯದಲ್ಲಿ ಯಾವ ಆಸ್ತಿಗಳು ಉಳಿದುಕೊಂಡವು ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆ ಭಾಗಕ್ಕೆ ತೆಗೆದುಕೊಂಡ ಸ್ವತ್ತುಗಳನ್ನು ಹೊರತುಪಡಿಸಿ ಉಳಿದ ಸ್ವತ್ತುಗಳನ್ನು ಅವರ ಮೂವರು ಸಹೋದರರು ಅನುಭವಿಸಿಕೊಂಡು ಬಂದಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ತಂದೆ ಹಾಗೂ ಅವರ ಮೂವರು ಸಹೋದರರು 1953 ಕ್ಕಿಂತ ಪೂರ್ವದಲ್ಲಿ ಎಲ್ಲಾ ಸ್ವತ್ತುಗಳನ್ನು ಒಟ್ಟಿಗೆ ಅನುಭವಿಸುತ್ತಿದ್ದರೋ, ಇಲ್ಲವೋ ನನಗೆ ಗೊತ್ತಿಲ್ಲ ನಿಡಿ-56 ರ ಪಾಲು ಪಾರಿಕತ್ತಿನ ಮೂಲಕ ಇಂತಿಂತ ಆಸ್ತಿಗಳು ನಮ್ಮ ತಂದೆ ಭಾಗಕ್ಕೆ ಬಂದ ವಿಚಾರವನ್ನು ನನ್ನ ತಕರಾರಿನಲ್ಲಿ ಹೇಳಿ ಬರೆಸಿರುವುದಿಲ್ಲ. ಸಾಕ್ಷಿ ಮುಂದುವರೆದು ವಿಭಾಗ ಆಗಿರುವ ವಿಚಾರವನ್ನು ಹೇಳಿ ಬರೆಸಿರುತ್ತೇವೆ.

7. ನಿಡಿ-56 ರ ಪಾಲು ಪಾರಿಕತ್ತಿನ ಮೇರೆಗೆ ನಮ್ಮ ತಂದೆಯ ಭಾಗಕ್ಕೆ ಬಂದು ಸ್ವತ್ತುಗಳ ಪೈಕಿ 1 ಅಥವಾ 2 ಸ್ವತ್ತುಗಳ ಖಾತೆ ನಮ್ಮ ತಂದೆಯ ಹೆಸರಿಗೆ ಆಗಿರುತ್ತದೆ. ರಿ.ಸ.ನಂ.78 ಮತ್ತು 79 ರ ಜಮೀನುಗಳು ನಮ್ಮ ತಂದೆಯ ಹೆಸರಿಗೆ ಖಾತೆಯಾಗಿರುತ್ತದೆ. ಆ ರೀತಿಯಾಗಿ ಖಾತೆ ಯಾವ ಸಾಲಿನಲ್ಲಿ ಆಯಿತು ಎಂದು ನನಗೆ ಗೊತ್ತಿಲ್ಲ. ನಿಡಿ-56 ರ ಪಾಲುಪಾರಿಕತ್ತಿನ ಆಧಾರದ ಮೇರೆಗೆ ನಮ್ಮ ತಂದೆಯ ಹೆಸರಿಗೆ ಖಾತೆ ಆಗಿರುತ್ತದೆ ಎಂದು ತೋರಿಸಲು ಕಂದಾಯ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಯಾವ ಯಾವ ಆಸ್ತಿಗಳು ನನ್ನ ತಂದೆಯ ಮೂವರು ಸಹೋದರರ ಭಾಗಕ್ಕೆ ಹೋದವು ಎನ್ನುವ ವಿಚಾರವನ್ನು ನನ್ನ ತಕರಾರಿನಲ್ಲಿ ಹೇಳಿರುವುದಿಲ್ಲ. ನಿಡಿ-56 ರ ವಿಭಾಗದ ವಿಚಾರವು ನನಗಿಂತ ನನ್ನ ತಂದೆ 1 ನೇ ಪ್ರತಿವಾದಿಗೆ ಚೆನ್ನಾಗಿ ತಿಳಿದಿರುತ್ತದೆ ಅಂದರೆ ಸಾಕ್ಷಿ ಅವರು ಅವಿದ್ಯಾವಂತರಿದ್ದು, ದಾಖಲೆಯನ್ನು ಸರಿಯಾಗಿ ಓದಿರುವುದಿಲ್ಲ ಅಂತ ನುಡಿಯುತ್ತಾರೆ. ನಿಡಿ-56 ನ್ನು ಯಾರು ಬರೆದರು ಅಂದರೆ ನನಗೆ ಗೊತ್ತಿಲ್ಲ. ನಿಡಿ-56 ಕ್ಕೆ ಸಿದ್ದಜ್ಜ ಅಳಿಯಂದಿರಾದ ನಾಗೇನಹಳ್ಳಿ ತಿಮ್ಮಪ್ಪ, ಮಾಚೇನಹಳ್ಳಿ ದಾಸಪ್ಪ ಸಹಿ ಮಾಡಿರುತ್ತಾರೆ.

8. ನಿಡಿ-56 ರ ಪತ್ರವನ್ನು ನಮ್ಮ ತಂದೆಗೆ ತಿಳಿಯದಂತೆ ಈ ದಾವೆಗಾಗಿ ನಾನು ಸೃಷ್ಟಿಸಿರುತ್ತೇನೆ ಅಂದರೆ ಸರಿಯಲ್ಲ. ನಮ್ಮ ತಂದೆ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿದರೆ ನಿಡಿ-56 ರ ದಾಖಲೆಯನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಅವರನ್ನು ನ್ಯಾಯಾಲಯಕ್ಕೆ ಬರದಂತೆ ನೋಡಿಕೊಂಡು ನಾನು ಸಾಕ್ಷ್ಯನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಈ ಹಂತದಲ್ಲಿ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು,
ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)
ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ